## ಅಂಪೈರ್‌ಗಳಿಗೂ ಪ್ರಯೋಗಗಳ ಶಾಲೆ



ವಿವಿಧ ವಯೋಮಿತಿಯೊಳಗಿನ ಕ್ರಿಕೆಟ್ ಟೂರ್ನಿಗಳಿಂದ ಹಿಡಿದು ಅಂತರರಾಷ್ಟ್ರೀಯ ಮಟ್ಟದ ಟಿ–20, ಏಕದಿನ ಮತ್ತು ಟೆಸ್ಟ್ ಪಂದ್ಯಗಳಿಗೆ ಅಂಪೈರಿಂಗ್ ಜವಾಬ್ದಾರಿ ನಿರ್ವಹಿಸುವ ಪ್ರತಿಯೊಬ್ಬರಿಗೂ ಪ್ರಥಮ ದರ್ಜೆ ಕ್ರಿಕೆಟ್‌ಗಳು ಪ್ರಯೋಗಶಾಲೆ ಇದ್ದಂತೆ.

ಇಂಥ ಟೂರ್ನಿಗಳಲ್ಲಿ ಆಟಗಾರರು ಮಾತ್ರವಲ್ಲದೆ ಅಂಪೈರ್‌ಗಳು ಕೂಡ ಹೊಸ ವಿಷಯಗಳನ್ನು ಕಲಿಯಲು ಸಾಧ್ಯವಾಗುತ್ತದೆ. 14, 16 ಹಾಗೂ 19 ಹೀಗೆ ವಿವಿಧ ವಯಸ್ಸಿನ ಒಳಗಿನವರ ಟೂರ್ನಿಗಳಲ್ಲಿ ಬೌಲರ್ ಕೈ ಮೇಲಕ್ಕೆ ಎತ್ತಿ ಬ್ಯಾಟ್ಸ್‌ಮನ್ ಬಳಿ ಚೆಂಡು ಎಸೆಯುವ ತನಕದ ಕಿರು ಅವಧಿಯಲ್ಲಿ ಪ್ರತಿಯೊಂದನ್ನೂ ಕಣ್ಣಲ್ಲಿ ಕಣ್ಣಿಟ್ಟು ನೋಡಲು ಅವಕಾಶವಿರುತ್ತದೆ. ಸಾಮಾನ್ಯವಾಗಿ ಈ ವಯೋಮಾನದವರ ಟೂರ್ನಿಗಳಲ್ಲಿ ಬೌಲರ್‌ಗಳ ವೇಗವೂ ಕಡಿಮೆಯಾಗಿರುತ್ತದೆ.

ರಣಜಿಯಂಥ ಟೂರ್ನಿಗಳಲ್ಲಿ ಹಿಂದೆಲ್ಲ ಭಾರತ ತಂಡದಲ್ಲಿ ಆಡಿದ ಆಟಗಾರರೂ ಆಡುತ್ತಿದ್ದರು. ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ವೇಗದ ಬೌಲಿಂಗ್ ಮಾಡುವವರು ದೇಶಿ ಕ್ರಿಕೆಟ್‌ನಲ್ಲಿ ಸ್ಪಿನ್ ಬೌಲಿಂಗ್ ಮಾಡುತ್ತಾರೆ. ಅಂಥ ಆಟಗಾರರು ಇದ್ದಾಗಲೂ ಅವರ ಬೌಲಿಂಗ್ ಗಮನವಿಟ್ಟು ನೋಡುವ ವೇಗ ಹೆಚ್ಚಾಗುತ್ತದೆ. ಅಂಪೈರಿಂಗ್‌ನಲ್ಲಿಯೇ ಹೊಸ ಪ್ರಯೋಗಗಳನ್ನು ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ರಣಜಿ ಸೇರಿದಂತೆ ಎಲ್ಲಾ ದೇಶಿ ಟೂರ್ನಿಗಳು ಅಂಪೈರ್‌ಗಳಿಗೆ ಕಲಿಕಾ ಶಾಲೆ ಎನಿಸಿವೆ.

**-ವಿನಾಯಕ ಕುಲಕರ್ಣಿ**
ಹಿರಿಯ ಕ್ರಿಕೆಟ್ ಅಂಪೈರ್




ಇದೇ ರೀತಿ ಕಷ್ಟದ ಸಂಕೋಲೆಗಳಿಂದ ಹೊರಬಂದು ನಕ್ಷತ್ರದಂತೆ ಹೊಳೆದ ರೈತನ ಪುತ್ರ ಮೊಹಮ್ಮದ್ ಶಮಿ, ಸರ್ಕಾರಿ ಆಸ್ಪತ್ರೆಯಲ್ಲಿ ನರ್ಸ್ ಆಗಿದ್ದರೂ ಮಗ ರವೀಂದ್ರ ಜಡೇಜಾ ಅವರನ್ನು ಎತ್ತರಕ್ಕೆ ಬೆಳೆಯುವಂತೆ ಮಾಡಿದ ಅವರ ತಾಯಿ, ಒಪ್ಪೊತ್ತಿನ ಊಟಕ್ಕೂ ಪರದಾಡುವ ಸಂಕಷ್ಟದಲ್ಲಿದ್ದ ಹಾರ್ದಿಕ್ ಪಾಂಡ್ಯ, ರೈಲ್ವೆಯಲ್ಲಿ ಉದ್ಯೋಗಿಯಾಗಿದ್ದ ಮಹೇಂದ್ರ ಸಿಂಗ್ ಧೋನಿ ಭಾರತ ತಂಡಕ್ಕೆ ವಿಶ್ವಕಪ್ ತಂದುಕೊಟ್ಟ ಸಾಧನೆಯ ಕಥನಗಳು ಇನ್ನೊಬ್ಬರಿಗೆ ಪ್ರೇರಣೆಯಾಗುವಂತಿವೆ.

ವೇಗದ ಬೌಲರ್‌ಗಳ ತಾಳ್ಮೆ ಪರೀಕ್ಷೆ ಮಾಡುತ್ತಲೇ ಕಲಾತ್ಮಕ ಆಟಕ್ಕೆ ಹೆಸರಾದ ರಾಹುಲ್ ದ್ರಾವಿಡ್, ವಿವಿಎಸ್ ಲಕ್ಷ್ಮಣ್, ಸ್ಫೋಟಕ ಬ್ಯಾಟಿಂಗ್‌ಗೆ ಹೆಸರಾದರೂ ಕ್ರೀಸ್‌ನಲ್ಲಿ ಹೆಚ್ಚುಹೊತ್ತು ನಿಲ್ಲಬಲ್ಲ ಸಾಮರ್ಥ್ಯ ಹೊಂದಿದ್ದ ವೀರೇಂದ್ರ ಸೆಹ್ವಾಗ್, ಹಲವು ದಾಖಲೆಗಳ ಒಡೆಯ ಸಚಿನ್ ತೆಂಡೂಲ್ಕರ್, ಗಂಟೆಗಟ್ಟಲೆ ಬೌಲಿಂಗ್ ಮಾಡುವ ಶಕ್ತಿ ಹೊಂದಿದ್ದ ವೇಗಿಗಳಾದ ಜಹೀರ್ ಖಾನ್, ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್, ಆಶಿಶ್ ನೆಹ್ರಾ, ಅಜಿತ್ ಅಗರಕರ್, ಮೊಹಮ್ಮದ್ ನಿಸಾರ್ ಅವರ 'ಶಕ್ತಿ'ಯ ಕಥೆಗಳೇ ಮುಂದಿನ ಪೀಳಿಗೆಯ ಬದುಕಿಗೆ ದಾರಿದೀಪವಾಗುತ್ತವೆ. ಆದರೆ, ಐಪಿಎಲ್ ಭರದಲ್ಲಿ ದೇಶಿ ಕ್ರಿಕೆಟ್ ಕಡೆಗಣಿಸಿ ಬಿಸಿಸಿಐ ಯುವ ಆಟಗಾರರಲ್ಲಿನ ಸಾಮರ್ಥ್ಯ ಕುಸಿಯುವಂತೆ ಮಾಡುತ್ತಿದೆ. ಅಸಮರ್ಪಕ ವಾರ್ಷಿಕ ಕ್ರಿಕೆಟ್ ಟೂರ್ನಿಗಳು, ಯೋಜನೆಗಳೂ ಇದಕ್ಕೆ ಕಾರಣ.

ಇತ್ತೀಚೆಗೆ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್, ದಕ್ಷಿಣ ಆಫ್ರಿಕಾದಲ್ಲಿ ನಡೆದ ಏಕದಿನ ಸರಣಿಯ ವೇಳೆ



1974ರಲ್ಲಿ ರಣಜಿ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ ಕರ್ನಾಟಕ ತಂಡದ ಆಟಗಾರರು ಬೆಂಗಳೂರಿನಲ್ಲಿ 'ಪ್ರಜಾವಾಣಿ' ಕಚೇರಿಗೆ ಭೇಟಿ ನೀಡಿದ್ದ ಸಂದರ್ಭ